3. ವಿಷಯ: ಉತ್ತರ ಕರ್ನಾಟಕ ಪಟ್ಟಣಗಳಲ್ಲಿ ಮೂಲಭೂತ ಸೌಕರ್ಯಗಳ ಸಲುವಾಗಿ ADB ಸಹಾಯದಿಂದ ಪ್ರಾರಂಭಿಸಿರುವ ಯೋಜನೆಯ ಕೆಲಸ ಆಮೆ ವೇಗದಲ್ಲಿ ನಡೆಯುತ್ತಿರುವ ಬಗ್ಗೆ.

ಶ್ರೀ ಡಿ.ಆರ್.ಪಾಟೀಲ್ (ಗದಗ): ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕ ಪಟ್ಟಣಗಳಲ್ಲಿ ಮೂಲಭೂತ ಸೌಕರ್ಯಗಳ ಸಲುವಾಗಿ ADB ಸಹಾಯದಿಂದ ಪ್ರಾರಂಭಿಸಿರುವ ಯೋಜನೆಯ ಕೆಲಸ ಆಮೆ ವೇಗದಲ್ಲಿ ನಡೆಯುತ್ತಿದ್ದು, ಈ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಲು ಕೊರತೆ ಬೀಳಬಹುದಾದ ಹಣಕಾಸು ಹೊಂದಾಣಿಕೆ ಹಾಗೂ ಯೋಜನೆ ಕಾರ್ಯಗತ ಮಾಡುವ ಕುರಿತು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್.ಶ್ರೀನಿವಾಸ (ಪೌರಾಡಳಿತ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದ ಆಯ್ದ ಮುಖ್ಯ ಪಟ್ಟಣಗಳಲ್ಲಿ ನಗರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯನ್ನು ಏಷಿಯನ್ ಅಭಿವೃದ್ಧಿ ಬ್ಯಾಂಕಿನ ನೆರವಿನೊಂದಿಗೆ ಅನುಷ್ಠಾನಗೊಳಿಸಲು ಕರ್ನಾಟಕ ಸರ್ಕಾರ ಕೆಯುಐಡಿಎಫ್‌ಸಿ ಯನ್ನು ನೋಡಲ್ ಸಂಸ್ಥೆಯನ್ನಾಗಿ ನೇಮಿಸಿರುತ್ತದೆ. ಉತ್ತರ ಕರ್ನಾಟಕದ ಈ ಯೋಜನೆಯಡಿಯಲ್ಲಿ 25 ಆಯ್ಕೆ ಮಾಡಲಾಗಿರುವ ಪಟ್ಟಣಗಳಾವುವೆಂದರೆ:

ಬಾದಾಮಿ, ಬೀದರ್, ಬಿಜಾಪುರ, ಬೆಳಗಾಂ, ಬಳ್ಳಾರಿ, ಚಾಮರಾಜನಗರ, ದಾವಣಗೆರೆ, ಗದಗ್–ಬೆಟಗೇರಿ, ಗಂಗಾವತಿ, ಗೋಕಾಕ್, ಗುಲ್ಬರ್ಗಾ, ಹಾವೇರಿ, ಹೊಸಪೇಟೆ, ಹುಬ್ಬಳ್ಳಿ–ದಾರವಾಡ, ಜಮಖಂಡಿ, ಕೊಪ್ಪಳ, ರಬಕವಿ–ಬನಹಟ್ಟಿ, ರಾಯಚೂರು, ರಾಣಿಬೆನ್ನೂರು, ಯಾದಗಿರ್, ಬಸವಕಲ್ಯಾಣ, ಸಿಂಧನೂರು, ಶಹಬಾದ್, ನಪ್ಪಾಣಿ ಮತ್ತು ಇಳಕಲ್.

ಈ ಕೆಳಕಂಡ ಆದ್ಯತೆಯ ಕಾಮಗಾರಿಗಳನ್ನು ಮಾತ್ರ ಹಂತಗಳಲ್ಲಿ ತೆಗೆದುಕೊಳ್ಳಲಾಗುವುದು.

ಮೊದಲನೆಯ ಹಂತ: ಕುಡಿಯುವ ನೀರಿನ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ, ಮಳೆನೀರಿನ ಚರಂಡಿಗಳು, ಬಡತನ ನಿರ್ಮೂಲನಾ ಕಾರ್ಯಕ್ರಮ (ಕೊಳಚೆ ಪ್ರದೇಶ ಅಭಿವೃದ್ಧಿ, ಕಡಿಮೆ ವೆಚ್ಚದ ಶೌಚಾಲಯ, ಸಾಮುದಾಯಿಕ

ಅಭಿವೃದ್ಧಿ ಕಾರ್ಯಕ್ರಮ ಇತ್ಯಾದಿ), ಪೌರಸಭೆಯ ಇತರೆ ಮೂಲ ಸೌಕರ್ಯ (ಅಗ್ನಿಶಾಮಕ ಸೇವೆ, ಪ್ರವಾಸೋದ್ಯಮ ಅಭಿವೃದ್ಧಿ.

ಎರಡನೇ ಹಂತ: ನಗರ ರಸ್ತೆಗಳು, ಪೌರಸಭೆಯ ಇತರೆ ಮೂಲ ಸೌಕರ್ಯ (ಕೆರೆ ಅಭಿವೃದ್ಧಿ ಇತ್ಯಾದಿಗಳು)

ಈ ಯೋಜನೆಯ ಒಟ್ಟು ವೆಚ್ಚ 440 ದಶಲಕ್ಷ ಅಮೇರಿಕನ್ ಡಾಲರ್ (ಅಂದಾಜು ರೂ.1980 ಕೋಟಿ) ಗಳಿಗೆ ನಿಗದಿಪಡಿಸಲಾಗಿದೆ. ಸಾಲ ಒಪ್ಪಂದವನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ನೊಂದಿಗೆ ಅಕ್ಟೋಬರ್ 2006ರಲ್ಲಿ ಮಾಡಿಕೊಳ್ಳಲಾಗಿದೆ. ಈ ಯೋಜನೆಗೆ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಡಿಸೆಂಬರ್ 2006/2007ರ ಜನವರಿಯಲ್ಲಿ ಅನುಮೋದನೆ ನೀಡಿರುತ್ತದೆ. 2007ರ ಡಿಸೆಂಬರ್ ತಿಂಗಳಿನಲ್ಲಿ ಸಾಲ ಒಪ್ಪಂದಕ್ಕೆ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಸಹಿ ಮಾಡುವ ನಿರೀಕ್ಷೆಯಿದೆ.

ಈ ಕಾರ್ಯಕ್ರಮದಲ್ಲಿ ಪುರಸಭಾ ಸುಧಾರಣೆ ಮತ್ತು ಸಾಮರ್ಥ್ಯಾಭಿವೃದ್ಧಿ ಸೇರಿರುತ್ತದೆ.

ಈ ಯೋಜನೆಗೆ ಸಂಬಂಧಿಸಿದಂತೆ ಕೆಳಕಂಡ ಪ್ರಕ್ರಿಯೆಗಳು ನಡೆಯುತ್ತಿದ್ದು ವಿಳಂಬದ ಪ್ರಶ್ನೆ ಉದ್ಭವಿಸುವುದಿಲ್ಲ.

- ಇದು ಎ.ಡಿ.ಬಿ. ನೆರವಿನ ಯೋಜನೆಯಾಗಿದ್ದು, ಎಲ್ಲಾ ರೀತಿಯ ಎ.ಡಿ.ಬಿ ಕಾರ್ಯ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಇದು ಮುಕ್ತಾಯದ ಹಂತದಲ್ಲಿದೆ. ಆದುದರಿಂದ ಯಾವುದೇ ತರಹದ ವಿಳಂಬವಾಗಿರುವುದಿಲ್ಲ.

- ಈ ಕಾರ್ಯಕ್ರಮದಡಿ ಗುರುತಿಸಿದ ಕಾಮಗಾರಿಗಳಿಗೆ ಅಗತ್ಯಕ್ಕೆ ಅನುಗುಣವಾಗಿ ಹಣವನ್ನು ನಿಗದಿಗೊಳಿಸಲಾಗಿದ್ದು, ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಣದ ಕೊರತೆ ಇರುವುದಿಲ್ಲ.

- ಪ್ರಸ್ತುತ ಸಮಾಲೋಚಕರ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಕಿರು ಪಟ್ಟಿಯಲ್ಲಿ ಗುರುತಿಸಿದ ಸಮಾಲೋಚಕರು ತಾಂತ್ರಿಕ ಮತ್ತು ಆರ್ಥಿಕ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ. ತಾಂತ್ರಿಕ ಪ್ರಸ್ತಾವನೆಗಳ

ಮೌಲ್ಯಮಾಪನವನ್ನು ಎ.ಡಿ.ಬಿ ಯು ಅನುಮೋದಿಸಿದ್ದು, ಆರ್ಥಿಕ ಪ್ರಸ್ತಾವನೆಗಳ ಮೌಲ್ಯಮಾಪನ ಕಾರ್ಯ ಪ್ರಗತಿಯಲ್ಲಿದೆ. ಸಮಾಲೋಚಕರನ್ನು ಆಗಸ್ಟ್, 2007 ರಲ್ಲಿ ನೇಮಕಗೊಳಿಸುವ ಸಾಧ್ಯತೆಯಿದೆ.

- ನೇಮಕಗೊಂಡ ಸಮಾಲೋಚಕರು ಸಮೀಕ್ಷೆ ಕಾರ್ಯ ಕೈಗೊಂಡು, ಯೋಜನಾ ಅಂದಾಜುಗಳು ಹಾಗೂ ವಿಸ್ತೃತ ಯೋಜನಾ ವರದಿಗಳನ್ನು ತಯಾರಿಸುವರು, ನಂತರ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ ಯೋಜನೆ 2003 ರಲ್ಲಿ ಎಸ್.ಎಂ.ಕೃಷ್ಣ ಸರ್ಕಾರ ಇದ್ದಾಗ ಇದನ್ನು ಪ್ರಾರಂಭ ಮಾಡಿದರು. ನಂಜುಡಪ್ಪ ವರದಿಯನ್ನು ಆಧರಿಸಿ ಉತ್ತರ ಕರ್ನಾಟಕದ ಪಟ್ಟಣದೊಳಗೆ ಮೂಲಭೂತ ಸೌಲಭ್ಯವನ್ನು ಕೊಡಬೇಕೆಂದು ಹೇಳಿ ಈ ಯೋಜನೆ ಪ್ರಾರಂಭವಾಯಿತು. 2003 ರಲ್ಲಿ ಪ್ರಾರಂಭವಾಗಿದ್ದು, ಇನ್ನೂ ಸಾಲದ ಅಗ್ರಿಮೆಂಟ್ ಆಗಿಲ್ಲ. ಇದಕ್ಕೆ ಸಚಿವರು ವಿಳಂಬವಾಗಿಲ್ಲವೆಂದು ಅನ್ನುತ್ತಾರೆ. ನಾಲ್ಕು ವರ್ಷವಾದರೂ ವಿಳಂಬವಾಗಿಲ್ಲವೆಂದರೆ ಒಪ್ಪಿಕೊಳ್ಳೋಣ. ಇದನ್ನು ಆಮೆ ವೇಗ ಎನ್ನುತ್ತೀರೋ, ಅಥವಾ ಬಹಳ ವೇಗವಾಗಿ ನಡೆಯುತ್ತದೋ ಅದನ್ನು ತಾವೇ ಯೋಚನೆ ಮಾಡಬೇಕು. ಮೊದಲು ಇದನ್ನು ಕನ್ಸೀವ್ ಮಾಡಿದಾಗ 20 ನಗರಗಳಿಗೆ 700 million dollars was the project cost. ಅದನ್ನು 25 ನಗರಗಳಿಗೆ ವಿಸ್ತರಿಸಿದರು. 440 ಮಿಲಿಯನ್ ಡಾಲರ್ಸ್‌ಗೆ ಅದನ್ನು ಇಳಿಸಿದರು. ಇವರು ಹೇಗೆ ಇಳಿಸಿಕೊಂಡು ಹೋಗುತ್ತಾರೆ ಹಾಗೇ ಕೆಲವು ಮೂಲಭೂತ ಸೌಕರ್ಯ ಕೆಲಸಗಳನ್ನು ಬಿಟ್ಟುಕೊಂಡು ಹೋಗುತ್ತಾರೆ. ಈಗ ನಮ್ಮ ದುರ್ವೈವಕ್ಕೆ ಏನಾಗಿದೆ ಎಂದರೆ, steel, cement rate ಹೆಚ್ಚಿಗೆ ಆಗಿದೆ. ಆಮೇಲೆ dollar-rupee exchange rate ಕಡಿಮೆಯಾಗಿದೆ. ಮತ್ತೆ ಇದಕ್ಕೆ ದುಡ್ಡು ಕಡಿಮೆಯಾದಂತೆ ಗದಗಕ್ಕೆ ಕುಡಿಯುವ ನೀರನ್ನು ತಂದರು. ಅದಕ್ಕೆ ಅದನ್ನು ಸ್ವಲ್ಪ ಕಡಿಮೆ ಮಾಡಿ ಅಷ್ಟರಲ್ಲಿಯೇ ಅದನ್ನು ಮುಗಿಸಿ ಎಂದು ಇವರು ಹೇಳುವವರು, ಹೀಗಾಗಬಾರದು. ನೀವು ಏನೇನು ಮೂಲಭೂತ ಸೌಕರ್ಯಗಳನ್ನು ಕೊಡಬೇಕೆಂದು ವಿಚಾರ ಮಾಡಿದ್ದೀರಿ, ಈ 25 ನಗರದೊಳಗೆ ಆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕೊಡಲಿಕ್ಕೆ

ಸರ್ಕಾರ ಬದ್ಧವಾಗಿರಬೇಕು. ಅದಕ್ಕೆ ಏನಾದರೂ ಹಣಕಾಸಿನ ಕೊರತೆ ಆದರೆ, ಸರ್ಕಾರ ಆ ಹಣವನ್ನು ತನ್ನ ಮೂಲದಿಂದ ಹೊಂದಿಸಬೇಕು. ಇದಕ್ಕೆ ನೀವು ಬದ್ಧವಾಗದೇ ನೀವು ಈಗ 1980 ಕೋಟಿ ರೂ.ಗಳಿಗೆ ನಿಲ್ಲಿಸಿದ್ದೀರಿ. ಈ ಹಣದಲ್ಲಿಯೇ ಏನೇನು ಕೆಲಸಗಳು ಆಗುತ್ತವೆ, ಅಷ್ಟರಲ್ಲಿಯೇ ಮಾಡಿ ಎಂದು ಕೈ ಎತ್ತುವಂಥ ಕೆಲಸವಾಗಬಾರದು. ಈಗಾಗಲೇ ನಮಗೆ ಅನ್ಯಾಯವನ್ನು ಮಾಡಿದ್ದೀರಿ. 700 ಮಿಲಿಯನ್ ಡಾಲರ್ಸ್ ಇದ್ದದ್ದನ್ನು 440 ಮಿಲಿಯನ್ ಡಾಲರ್ಸ್‌ಗೆ ನೀವು ಅದನ್ನು ಇಳಿಸಿದ್ದೀರಿ. ಕರಾವಳಿ ಏರಿಯಾದಲ್ಲಿ ಇದೇ ಮೂಲಭೂತ ಸೌಕರ್ಯಗಳನ್ನು ಕೊಡಬೇಕಾದರೆ ನಮಗೆ ಕೊಡುವ ಫಲಾನುಧಾನದ ಡಬಲ್ ಫಲಾನುದಾನ ಅವರಿಗೆ ಕೊಡುತ್ತಾರೆ. ನಮಗೆ ಈಗಾಗಲೇ ತಾರತಮ್ಯವನ್ನು ಮಾಡಿದ್ದಾರೆ. ಅದಕ್ಕೆ ಸರ್ಕಾರ ಇದರ ಬಗ್ಗೆ ನೀವು ಏನೇನು ಮೂಲಭೂತ ಸೌಕರ್ಯಗಳನ್ನು ಕೊಡುವುದು ಇದೆ, ಎಲ್ಲಾ ಮೂಲಭೂತ ಸೌಕರ್ಯಗಳಿಗೆ ಕಾಸ್ಟ್ ಎಷ್ಟೇ ಆಗಲಿ ಕೊಡುತ್ತೇವೆ ಎನ್ನುವ ಭರವಸೆ ಈ ಸದನಕ್ಕೆ ಬೇಕು. ಇದನ್ನು ನೀವು ಬೇಗ ಪ್ರಾರಂಭ ಮಾಡಬೇಕು. ಇನ್ನೂ ಆ consultant ಅನ್ನು appointment ಆಗಿಲ್ಲ. ಆ consultants appointment ಅನ್ನು short list ಮಾಡಿದ್ದರಲ್ಲಿ Span consultant ಎಂದು ಒಂದು ಸಂಸ್ಥೆ ಇದೆ. ಉದಾಸಿಯವರನ್ನು ತಾವು ಕೇಳಿ. Span consultant ನವರ ಕೆಲಸ ಜಲ ನಿರ್ಮಲ ಯೋಜನೆಯಲ್ಲಿ ನಮಗೆ ಸಮಾಧಾನಕರವಾಗಿಲ್ಲ. ನಮ್ಮ ಹತ್ತಿರ ಬಾಂಬೆ, ದೆಹಲಿಯಿಂದ ದೊಡ್ಡ ದೊಡ್ಡ consultants ಬಂದು ಬಿಡುತ್ತಾರೆ. ಮುಂದೆ ಅವರು ಇಲ್ಲಿ sub contractor ಗೆ ಕೊಡುತ್ತಾರೆ. ಅವರಲ್ಲಿ ಏನು contract ಆಗಿರುತ್ತದೆ ಆ ಪ್ರಕಾರ ಅವರು ಆ ಕೆಲಸವನ್ನು ಮಾಡಿ sub contractor ನವರು ಹೋಗಿ ಬಿಡುತ್ತಾರೆ. ಈಗ ನೀವು ಕೊಟ್ಟಿರುವ contractor ನಿಮ್ಮಲ್ಲಿಯೂ ಬರುವುದಿಲ್ಲ ಆ ಕೆಲಸ ಮಾಡುವ ಸ್ಥಳಕ್ಕೂ ಬರುವುದಿಲ್ಲ. ಅದಕ್ಕಾಗಿ ಅವರ track record ನೋಡಿ, ಯಾರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಅಂತಹ consultant ಅನ್ನು ನೇಮಿಸುವ ಕೆಲಸವಾಗಬೇಕು. ಅದರ ಪೂರ್ತಿ ಕೆಲಸವಾಗಬೇಕು. ಅದಕ್ಕೆ ಹಣಕಾಸಿನ ಕೊರತೆಯಾಗದಂತೆ ನೋಡಿಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಕೊಡಬೇಕು.

(ಗೊಂದಲ)

. ಶ್ರೀ ಆರ್.ಶ್ರೀನಿವಾಸ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಸದಸ್ಯರು ಏನು ಹೇಳಿದ್ದಾರೆ ಅದನ್ನು ಗುರ್ತಿಸಿದ್ದೇವೆ. ಅವರ agreement ಡಿಸೆಂಬರ್‌ನಲ್ಲಿ ಆದರೂ ಕೂಡ ಈಗ ಏನು technical bid approval ಆಗಿದೆ, ಅದಕ್ಕೆ ಈಗಾಗಲೇ approval ಬಂದು ಬಿಟ್ಟಿದೆ. ಇನ್ನು ಕೆಲವೇ ದಿವಸಗಳಲ್ಲಿ financial bid approve ಆದ ತಕ್ಷಣ ಅದಕ್ಕೆ ಸಹಿ ಹಾಕುವುದಕ್ಕೆ ಮುಂಚಿತವಾಗಿ ಇದನ್ನು ಪ್ರಾರಂಭ ಮಾಡುವುದಕ್ಕೆ ನಾವು ಎಲ್ಲವನ್ನು ಸಿದ್ಧಪಡಿಸಿದ್ದೇವೆ. ಬಹುಶಃ ಇದನ್ನು ಸೆಪ್ಟೆಂಬರ್ ಅಂತ್ಯದಲ್ಲಿ ಇದನ್ನು ಪ್ರಾರಂಭ ಮಾಡಬೇಕೆಂದು ಒಂದು ಯೋಚನೆಯ ಹಾಗೂ ಒಂದು ಚಿಂತನೆ ಇದೆ. ಈಗ ಗೌರವಾನ್ವಿತ ಸದಸ್ಯರು ಹೇಳಿದರು. ಇದಕ್ಕೆ 700 ಮಿಲಿಯನ್ ಡಾಲರ್ಸ್ ಇತ್ತು ಎಂದು, ಇದಕ್ಕೆ ಪೂರಕವಾಗಿ 400 ಮಿಲಿಯನ್ ಡಾಲರ್ಸ್ ಮಾತ್ರ ಇದ್ದದ್ದು. ಇದನ್ನು ತದನಂತರ 440ಕ್ಕೆ ಏರಿಸಿರುತ್ತೇವೆ. 20 ರಿಂದ 25 ಪಟ್ಟಣಕ್ಕೆ ಹೆಚ್ಚಿಸಿದ್ದೇವೆ. ನಂಜುಂಡಪ್ಪ ವರದಿಯ ಪ್ರಕಾರ ಎಲ್ಲಾ ಆದ್ಯತೆಯನ್ನು ಕೊಟ್ಟಿದ್ದೇವೆ, ಎರಡನ್ನು ಮಾತ್ರ ಬಿಟ್ಟು, ಒಂದು ಚಾಮರಾಜನಗರ ಜಿಲ್ಲಾ ಕೇಂದ್ರವಾಗಿರುವುದರಿಂದ, ಇನ್ನೊಂದು ದಾವಣಗೆರೆ ಬಿಟ್ಟಿದ್ದೇವೆ. ಮಿಕ್ಕದೆಲ್ಲವನ್ನು ಮಾಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಇದನ್ನು ಆದಷ್ಟು ಜಾಗ್ರತೆಯಾಗಿ ಮಾಡುವುದಕ್ಕೆ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ನಾವು, ಅದು ಏನೇ ಆಗಿರಲಿ ಸೆಪ್ಟೆಂಬರ್ ಅಂತ್ಯದೊಳಗೆ ಅಥವಾ ಅಕ್ಟೋಬರ್‌ನಲ್ಲಿ ಮಾಡತಕ್ಕಂಥ ವ್ಯವಸ್ಥೆ ಮಾಡುತ್ತೇವೆಂದು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತೇನೆ.

(ಗೊಂದಲ)

ಅಧ್ಯಕ್ಷರು: ಈ ತರಹ ಗೊಂದಲ ಮಾಡಿದರೆ ಆಗುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್: ಇದಕ್ಕೆ ಹಣಕಾಸಿನ ಕೊರತೆ ಬೀಳದಂತೆ ನೋಡಿಕೊಳ್ಳುತ್ತೇವೆ ಎನ್ನುವ ಒಂದು ಭರವಸೆಯನ್ನು ಕೊಡಬೇಕು.

ಅಧ್ಯಕ್ಷರು: ಸ್ವಾಮಿ ಎಲ್ಲಿ ಭರವಸೆಯನ್ನು ಕೊಡುತ್ತಾರೆ?

(ಗೊಂದಲ)

ಶ್ರೀ ಆರ್.ಶ್ರೀನಿವಾಸ್: ಆ ಯೋಜನೆಯ ಪ್ಲಾನ್‌ನಲ್ಲಿ ಏನೇನು ಇದೆಯೋ ಅದಕ್ಕೆ ಆಗತಕ್ಕಂಥ ವೆಚ್ಚವನ್ನು ನಾವು ಕೊಡುತ್ತೇವೆ. ಪೂರ್ತಿ ವೆಚ್ಚವನ್ನು ಕೊಡುವುದಕ್ಕೆ ಆಗುವುದಿಲ್ಲ. ಆ ಯೋಜನೆಯ ವೆಚ್ಚ ಜಾಸ್ತಿಯಾದರೂ ಅದನ್ನು ಭರಿಸುವ ಜವಾಬ್ದಾರಿ ನಮ್ಮದು ಇರುತ್ತದೆ. ಆದರೆ further ಏನಾದರೂ ಮಾಡಬೇಕಾದರೆ ಅದಕ್ಕೆ ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ಈ ರೀತಿ ಗಲಾಟೆ ಮಾಡಿದರೆ ಹೊರಗಡೆ ಕಳುಹಿಸಿ ಬಿಡುತ್ತೇನೆ ಅಷ್ಟೆ. ನನಗೂ ಸಾಕಾಗಿದೆ. ಎಲ್ಲರೂ ಕುಳಿತುಕೊಳ್ಳಿ. ಸಹಿ ಹಾಕದಿರುವವರು ಕೂಡ ಎದ್ದು ನಿಂತುಕೊಂಡು ಬಿಡುವುದು. ನನಗೆ ಕೋಪ ಹತ್ತಿಸಬೇಡಿ.

4. ವಿಷಯ: ಹಾವೇರಿ ಜಿಲ್ಲೆಯಲ್ಲಿ ಬರುವ ಜಲ ನಿರ್ಮಲ ಯೋಜನೆ ಬಗ್ಗೆ.

ಶ್ರೀ ಶಿವರಾಜ್ ಸಜ್ಜನರ್(ಹಾವೇರಿ): ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಜಲ ನಿರ್ಮಲ ಯೋಜನೆಯ ಅಡಿಯಲ್ಲಿ 9 ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗೆ ಟೆಂಡರ್ ಮುಗಿದಿದ್ದು, ಹಣಕಾಸಿನ ಒಪ್ಪಿಗೆ ಇಲ್ಲದಿರುವುದರಿಂದ ಯೋಜನೆಯ ಕಾರ್ಯ ಸ್ಥಗಿತಗೊಂಡಿರುವುದರ ಬಗ್ಗೆ ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಎ.ರವೀಂದ್ರನಾಥ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ಹಿಂದಿನ ವಾರ ಉಪ ಮುಖ್ಯಮಂತ್ರಿಗಳು ಮತ್ತು ಹಾವೇರಿ ಜಿಲ್ಲೆಯ ಮಂತ್ರಿಯಾಗಿರುವ ಉದಾಸಿಯವರನ್ನು ಹಾಗೂ ಎಲ್ಲಾ ಶಾಸಕರನ್ನು ಕರೆದು ಎಲ್ಲಾ ಯೋಜನೆಗಳಿಗೆ ಹೆಚ್ಚಿನ ಹಣ ಆದರೂ ಸಹ ಕೊಡುವುದಕ್ಕೆ ತೀರ್ಮಾನವನ್ನು ತೆಗೆದುಕೊಂಡಿರುತ್ತೇವೆ. ಅದಕ್ಕೆ ಇವರೆಲ್ಲರೂ ಬಂದಿದ್ದಾರೆ. ಎಲ್ಲಾ ರೀತಿಯ ಒಪ್ಪಿಗೆಯನ್ನು ಕೊಟ್ಟಿದ್ದೇವೆ.